
ಇದಕ್ಕಿಂತ ತೀವ್ರವಾದ ಭಾವಗಳು ಇದ್ದಿರಬಹುದು. ಎಲ್ಲ ಕಾಲವೂ ಹಿಂದಣ ಮತ್ತು ಮುಂದಣ ಹೆಜ್ಜೆಗಳಿಗೆ ಜೊತೆಯಾಗಲು ಹಂಬಲಿಸುತ್ತಲೇ ಇರುತ್ತದೆ. ಕಾರಣ ಗೊತ್ತಿದ್ದು ಮತ್ತು ಗೊತ್ತಿಲ್ಲದೆ. ಎಲ್ಲ ಕಾಲಘಟ್ಟದಲ್ಲೂ ನಮ್ಮ ಕಾಲದ ಬಿಕ್ಕಟ್ಟುಗಳಿಗೆ ಪರಿಹಾರವು ಚರಿತ್ರೆಯಲ್ಲಿ ಇರಬಹುದೇನೋ ಎನ್ನುವ ನಂಬಿಕೆ ಇದ್ದೇ ಇರುತ್ತದೆ. ಅದು ಆಳದಲ್ಲಿ ಮಾನವ ವಿವೇಕದ ಬಗ್ಗೆ ಇರುವ ನಂಬಿಕೆಯಷ್ಟೇ ಚರಿತ್ರೆಯಿಂದ ಕಲಿಯಬೇಕಾದ, ಆದರೆ ಕಲಿಯದ ಮಾನವನ ಅವಸ್ಥೆ ಮತ್ತು ದುರಂತವನ್ನು ಕುರಿತ ಅರಿವೂ ಇದ್ದೀತು. ಇದರ ರಾಜಕೀಯ, ಸಾಮಾಜಿಕ ಆಯಾಮಗಳೇನೇ ಇರಲಿ, ಸಾಂಸ್ಕೃತಿಕ ನೆಲೆಗೆ ಮಾತ್ರ ಮೂರ್ತ ಅಮೂರ್ತ ನೆಲೆಗಳೆರಡೂ ಇವೆ. ತ್ರಿಕಾಲಗಳೊಂದಿಗೆ ಮನುಷ್ಯರು ಕಟ್ಟಿಕೊಳ್ಳಲು ಬಯಸುವ ಸಂಬಂಧವು ಕಲಾಪ್ರಕಾರಗಳೊಂದಿಗೆ ಹೊಂದಿರುವ ಸಾವಯವ ಸಂಬಂಧಕ್ಕೆ ಅನೇಕ ಆಯಾಮಗಳಿವೆ. ಅದು ಸತ್ಯದ ಹುಡುಕಾಟವಾಗಿರುತ್ತದೆ ಎನ್ನುವ ಮೂಲಭಿತ್ತಿಯ, ಮನುಷ್ಯ ನಡವಳಿಕೆಯ, ಕನಸು ಮತ್ತು ವಾಸ್ತವಗಳ ನಡುವಿನ ಕಂದರದ, ಬದುಕಿನ ಅಗಾಧ ಶಕ್ತಿ ಮತ್ತು ಹುಲು ಮಾನವರ ನಡುವಿನ ವಿಷಮ ಸಂಬಂಧದ... ಹೀಗೆ ಅನೇಕ ಮಗ್ಗುಲುಗಳು, ಮಜಲುಗಳು ಇದಕ್ಕಿದೆ. ಎಂದೇ ಕಲಾಕೃತಿಗಳು ಎಂದಿಗೂ ಕಾಲದಲ್ಲಿ ಹಳತಾಗುವುದಿಲ್ಲ. ನಿತ್ಯನೂತನ ಎನ್ನುವುದು ಕಲೆಯ ಪಥ್ಯಗಳ ಮಟ್ಟಿಗೆ ಎಂದೂ ಕ್ಲೀಷೆಯಾಗಲೀ ಅಪ್ರಸ್ತುತವಾಗಲೀ ಆಗದು.

ಸುಮಂಗಲಾ ಮುಮ್ಮಿಗಟ್ಟಿಯವರ 'ಬಯಲ ಬೆರಗು' ಕಾದಂಬರಿ ಈ ಪ್ರಕ್ರಿಯೆಯಲ್ಲಿರುವ ಕೃತಿ. ಇದನ್ನು ಅಜರಾಮರ ಕಲಾಕೃತಿಯೆಂದು ನಾನು ಹೇಳುತ್ತಿಲ್ಲ. ಅದಕ್ಕೆ ಈ ಎಲ್ಲ ಉದ್ದೇಶಗಳಿವೆ ಎಂದು ಮಾತ್ರ ಸ್ಪಷ್ಟಪಡಿಸುತ್ತಿದ್ದೇನೆ. ಜಗತ್ತು, ಗಾಂಧಿ, ಕಸ್ತೂರ್, ಅಕ್ಕನ ಬೆಂಬಿಡದಿರುವಾಗ ಇವರು ಅಲ್ಲಮನನ್ನು ಯಾಕೆ ಆರಿಸಿಕೊಂಡಿರಬಹುದು ಎನ್ನುವ ಪ್ರಶ್ನೆಯೂ ಸಹಜವಾಗಿಯೇ ನಮ್ಮಲ್ಲಿ ಏಳುತ್ತದೆ. ಏಕೆಂದರೆ,




**ಬಯಲ ಬೆರಗು**

ಲೇ: ಸುಮಂಗಲಾ ಎಸ್ ಮುಮ್ಮಿಗಟ್ಟಿ
ಪು: 548; ಬೆ: 450
ಪ್ರ: ಮ.ನಿ.ಪ್ರ. ಚೆನ್ನವೀರ ಮಹಾಸ್ವಾಮಿಗಳ ಗ್ರಂಥ ಪ್ರಕಟಣಾ ಸೇವಾ ಸಮಿತಿ, ಜಂಗಮಕ್ಷೇತ್ರ, ಲಿಂಗನಾಯಕನಹಳ್ಳಿ, ಹೂವಿನ ಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ.